**37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ.ನಂ. 17299/2020**

**ಚಾಸಾ-6 ಪ್ರಾಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | **ಹರೀಚಂದ್ರ** |
| **ತಂದೆಯ/ಗಂಡನ ಹೆಸರು** | **ಲೇ. ರಾಧಕೃಷ್ಣ** |
| **ವಯಸ್ಸು** | **48 ವರ್ಷ** |
| **ಉದ್ಯೋಗ** | **ಎಎಸ್ಐ ಅಶೋಕ್ ನಗರ ಪೊ. ಠಾಣೆ** |
| **ವಾಸ** | **ಬೆಂಗಳೂರು** |
| **ಪ್ರ ವ ಬೊ ದಿನಾಂಕ** | 04/06/2022 |

**<u>ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :</u>**

ನಾನು 2008 ರಿಂದ 2021 ರ ವರೆಗೆ ಬೆಂಗಳೂರು ಸಿಸಿಬಿ ಘಟಕದಲ್ಲಿ ಮುಖ್ಯ ಪೇದೆಯಾಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ 03/04/2020 ರಂದು ಮಧ್ಯಾಹ್ನದ ಸಮಯದಲ್ಲಿ ಚಾಸಾ.1 ರವರಿಗೆ ಅಕ್ರಮ ಮದ್ಯ ಮಾರಾಟದ ಬಗ್ಗೆ ಮಾಹಿತಿ ಬಂದಿದ್ದು, ಅದರಂತೆ ಸದರಿ ವಿಷಯವನ್ನು ಚಾಸಾ.1 ರವರು ನಮಗೆ ತಿಳಿಸಿ, ದಾಳಿ ಮಾಡಲು ಚಾಸಾ.1 ರವರು ಇಬ್ಬರೂ ಪಂಚರನ್ನು ಬರಮಾಡಿಕೊಂಡು ತಮ್ಮ ಜೊತೆ ನನ್ನನ್ನು ಮತ್ತು ಚಾಸಾ.4, 5 ಮತ್ತು 7 ರವರನ್ನು ಮತ್ತು ಪಂಚರನ್ನು ಕರೆದುಕೊಂಡು ಸುಮಾರು 06.15 ಕ್ಕೆ ಕಚೇರಿಯಿಂದ ಹೊರಟು ಬಾತ್ಮೀ ಬಂದ ಸ್ಥಳಕ್ಕೆ ಹೋಗಿ ಮರೆಯಾಗಿ ನಿಂತು, ಚಾಸಾ.4 ರವರಿಗೆ ಚಾಸಾ.1 ರವರು ಸೂಚನೆ ನೀಡಿ ಆರುೀಪಿತರು ಬಂದ ಕೂಡಲೇ ಸೂಚನೆ ನೀಡುವಂತೆ ತಿಳಿಸಿದ್ದು, ಅದರಂತೆ ಎರಡು ಮೋಟಾರು ಸೈಕಲ್ ನಲ್ಲಿ 4 ಜನ ಅಸಾಮಿಗಳು ಬಂದಿದ್ದು, ಚಾಸಾ.1 ರವರ ಸೂಚನೆಯಂತೆ ಚಾಸಾ.4 ರವರು ಆರೋಪಿತರ ಬಳಿ ಹೋಗಿ ಮಾತನಾಡುತ್ತಾ ನಮಗೆ ಸೂಚನೆ ನೀಡಿದ್ದು, ಅದರಂತೆ ನಾವು ಆರೋಪಿತರನ್ನು ಸುತ್ತುವರೆದು ಹಿಡಿದುಕೊಂಡಿದ್ದು, ಆ ಪೈಕಿ ಮೂರು ಜನ ಆರೋಪಿತರಾದ ಶರವಣ್, ಶಿವಕುಮಾರ್, ದಿಲೀಪ್ ಕುಮಾರ್ ಮತ್ತು ಓಡಿಹೋದ ಅಸಾಮಿ ಚೇತನ್ ಎಂದು ತಿಳಿದು ಬಂದಿರುತ್ತದೆ. ನಾವು ಸದರಿ ಅಸಾಮಿಗಳನ್ನು ವಿಚಾರಿಸಲಾಗಿ ಮೂರು ಜನ ಆರೋಪಿತರು ತಮ್ಮ ಬಳಿ ಬ್ಯಾಗ್ ಗಳನ್ನು ಹೊಂದಿದ್ದು, ಸದರಿ ಬ್ಯಾಗ್ ಗಳ ಬಗ್ಗೆ ವಿಚಾರಿಸಲಾಗಿ, ಅವರು

ಲಾಕ್ ಡೌನ್ ಅವಧಿಯಲ್ಲಿ ಮಧ್ಯ ಮಾರಾಟ ಮಾಡುವಂತಿಲ್ಲ, ಅದ್ದರಿಂದ ತಮಗೆ ಪರಿಚಯವಿರುವ ಕೆಲವು ಜನರುಗಳಿಂದ ಮಿಲಿಟರಿ ಕ್ಯಾಂಟೀನ್ ನಿಂದ ಮಧ್ಯದ ಬಾಟಲ್ ಗಳನ್ನು ಖರೀದಿ ಮಾಡಿ, ಅವುಗಳನ್ನು ದಿಲೀಪ್ ಕುಮಾರ್, ಶಿವ ಕುಮಾರ್ ಮತ್ತು ಚೇತನ್ ರವರ ಮೂಲಕ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ನಾವು ಪಂಚರ ಸಮಕ್ಷಮ ಅವರ ಬಳಿಯಿರುವ ಬ್ಯಾಗ್ ಗಳನ್ನು ಪರಿಶೀಲನೆ ಮಾಡಲಾಗಿ ಒಂದನೇ ಆರೋಪಿ ಶರವಣ ಬ್ಯಾಗ್ ನಲ್ಲಿ ತಲಾ 750 ಎಂ.ಎಲ್ ನ 10 ಟೀಚರ್ಸ್ ಸ್ಕಾಚ್ ವಿಸ್ಕಿ ಬಾಟಲ್ ಗಳು ಇದ್ದವು, ಸದರಿ 10 ಬಾಟಲ್ ಗಳು ಮತ್ತು ಆರೋಪಿತನ ಒಂದು ಮೈಕ್ರೋಮ್ಯಾಕ್ಸ್ ಮೊಬೈಲ್ ನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು, ಆ ಪೈಕಿ ಒಂದು ಬಾಟಲ್ ನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಅವುಗಳನ್ನು ಪ್ಯಾಕ್ ಮಾಡಿ, ಪಂಚರ ಸಹಿ ಪಡೆದುಕೊಂಡಿರುತ್ತಾರೆ.

ಎರಡನೇ ಆರೋಪಿ ಶಿವಕುಮಾರ್ ಈತನ ಬ್ಯಾಗನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಲಾಗಿ ತಲಾ 750 ಎಂಎಲ್ ನ 3 ಜಾನಿ ವಾಕರ್ ಬ್ಲಾಕ್ ಲೇಬಲ್ ವಿಸ್ಕಿ ಬಾಟಲ್ ಗಳು ಇದ್ದವು ಸದರಿ 3 ಬಾಟಲ್ ಗಳು ಮತ್ತು ಆರೋಪಿತನ ಒಂದು ನೀಲಿ ಬಣ್ಣದ ವಿವೋ ಮೊಬೈಲ್ ನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು, ಆ ಪೈಕಿ ಒಂದು ಬಾಟಲ್ ನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಅವುಗಳನ್ನು ಪ್ಯಾಕ್ ಮಾಡಿ, ಪಂಚರ ಸಹಿ ಪಡೆದುಕೊಂಡಿರುತ್ತಾರೆ.

ಮೂರನೇ ಆರೋಪಿ ದಿಲೀಪ್ ಕುಮಾರ್ ಈತನ ಬ್ಯಾಗನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಲಾಗಿ ತಲಾ 750 ಎಂಎಲ್ ನ 5 100 ಪೈಪರ್ ವಿಸ್ಕಿ ಬಾಟಲ್ ಗಳು ಇದ್ದವು ಸದರಿ 5 ಬಾಟಲ್ ಗಳು ಮತ್ತು ಆರೋಪಿತನ ಒಂದು ನೀಲಿ ಬಣ್ಣದ ವಿವೋ ಮೊಬೈಲ್ ನ್ನು ಚಾಸಾ.1 ರವರು ಪಂಚರ ಸಮಕ್ಷಮ ವಶಪಡಿಸಿಕೊಂಡು, ಆ ಪೈಕಿ ಒಂದು ಬಾಟಲ್ ನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಅವುಗಳನ್ನು ಪ್ಯಾಕ್ ಮಾಡಿ, ಪಂಚರ ಸಹಿ ಪಡೆದುಕೊಂಡು ಆರೋಪಿತರು ಬಂದಿದ್ದ ಎರಡು ದ್ವಿ ಚಕ್ರ ವಾಹನಗಳನ್ನು ಅಮಾನತ್ತು ಪಡಿಸಿಕೊಂಡು, ಸಂಜೆ 06.30 ರಿಂದ ರಾತ್ರಿ 08 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ನಂತರ ಮಾಲು ಮತ್ತು ಆರೋಪಿತರ ಸಮೇತ ಠಾಣೆಗೆ ವಾಪಸ್ಸಾಗಿ ಚಾಸಾ.1 ರವರು ಆರೋಪಿತರ ವಿರುದ್ದ ದೂರು ದಾಖಲು ಮಾಡಿರುತ್ತಾರೆ. ಮೂರು ಸ್ಯಾಂಪಲ್ ಬಾಟಲ್ ಗಳನ್ನು ನೋಡುತ್ತಿದ್ದು ಅವುಗಳನ್ನು ಪ್ರತ್ಯೇಕವಾಗಿ ಮೂ.ಮಾ-1 ರಿಂದ 3 ಎಂದು

ಗುರುತಿಸಲಾಯಿತು. ಆರೋಪಿತರಿಂದ ಮೊಬೈಲ್ ಮತ್ತು ಮೋಟರ್ ಸೈಕಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಒಂದು, ಮೂರು ಮತ್ತು ನಾಲ್ಕನೇ ಆರೋಪಿತರ ಪರ ಶ್ರೀ ಎಚ್.ಕೆ.ಸಿ ವಕೀಲರಿಂದಃ**

ದಾಳಿಗೆ ಬರುವಂತೆ ಪೊಲೀಸರು ನನಗೆ ಲಿಖಿತವಾಗಿ ನೋಟಿಸ್ ನೀಡಿರಲಿಲ್ಲ. ಚಾಸಾ.1 ರವರು ನನ್ನ ಸಮಕ್ಷಮ ಪಂಚರಿಗೆ ದಾಳಿ ಬಗ್ಗೆ ಮಾಹಿತಿ ನೀಡಿರುತ್ತಾರೆ. ನಾವು ಮಾಹಿತಿ ಬಂದ ಸ್ಥಳಕ್ಕೆ ಎಷ್ಟು ಗಂಟೆಗೆ ಹೋದೆವು ಎಂಬ ಬಗ್ಗೆ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನಾವು ನಮ್ಮ ಸರ್ಕಾರಿ ಜೀಪ್ ನಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ವಾಹನದ ನಂಬರ್ ನ್ನು ನಾನು ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಪೈ ವಿಸ್ತಾ ಹೋಟೆಲ್ ಬಳಿಯಿದ್ದ ಸಿಸಿಟಿವಿ ಫುಟೇಜ್ ಗಳನ್ನು ನಾವು ಪರಿಶೀಲನೆ ಮಾಡಿರುವುದಿಲ್ಲ ಮತ್ತು ಎರಡು ಬೈಕ್ ನಲ್ಲಿ 4 ಜನ ಅಸಾಮಿಳು ಬಂದ ಬಗ್ಗೆ ನಾವು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಆ ದಿನ ಚಾಸಾ.4 ರವರು ನಮಗೆ ಬಲಗೈ ಎತ್ತಿ ಸನ್ನೆ ಮಾಡಿ ತೋರಿಸಿರುತ್ತಾರೆಂದರೆ ಸರಿಯಲ್ಲ. ಓಡಿಹೋದ ವ್ಯಕ್ತಿಯ ಚಹರೆ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ. ಅದೇ ರೀತಿ ನಾವು ಹಿಡಿದುಕೊಂಡ ವ್ಯಕ್ತಿಗಳ ಚಹರೆ ಬಗ್ಗೆ ನಾನು ತಿಳಿಸಿರುವುದಿಲ್ಲ. ಒಂದನೇ ಆರೋಪಿತನ ಪೈಕಿ ಅಮನತ್ತು ಪಡಿಸಿಕೊಂಡ 10 ಬಾಟಲ್ ಗಳ ಪೈಕಿ ಒಂದು ಬಾಟಲ್ ನ್ನು ಸೀಲ್ ಮಾಡಿ ಪಂಚರ ಸಹಿ ಪಡೆದುಕೊಂಡಿರುತ್ತಾರೆ. ಒಂದು ಬಾಟಲ್ ನ್ನು ಪ್ರಬತ್ಯೇಕವಾಗಿ ಸ್ಯಾಂಪಲ್ ಗಾಗಿ ತೆಗೆದುಕೊಳ್ಳಲಾಯಿತು. ಬಾಟಲ್ ಮೇಲೆ ಬ್ಯಾಟಲ್ ಮೇಲೆ ನಮೂದು ಮಾಡಿದ್ದ ಸೀರಿಯಲ್ ನಂಬರ್ ನ್ನು ನಾನು ಹೇಳಿಕೆಯಲ್ಲಿ ತಿಳಿಸಿಲ್ಲ. ಆರೋಪಿತರ ಬ್ಯಾಗ್ ನಲ್ಲಿ ಯಾವುದೇ ಮದ್ಯದ ಬಾಟಲ್ ಗಳು ಇರಲಿಲ್ಲ ಮತ್ತು ನಾವು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಮೊಬೈಲ್ ಫೋನ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು : ಮೂರನೇ ಆರೋಪಿತರ ಶ್ರೀ ಎನ್.ಎನ್ ವಕೀಲರಿಂದಃ</u>**

ಮೂರನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆ ಇಲ್ಲ</u>**

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)</u>

**ಓ.ಹೇ.ಕೇ.ಸ.ಇದೆ**

**37 ನೇ ಎ.ಸಿ.ಎಂ.ಎಂ**